**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 89/2014 ಸಿಡಬ್ಲೂ: 1 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ26-11-2025

ಹೆಸರು : ರಾಮಲಿಂಗಪ್ಪ

ತಂದೆ ಹೆಸರು : ಭೀಮಪ್ಪ ಪೂಜಾರಿ

ವಯಸ್ಸು : 70 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ನಾಮವಾರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 4 ರಿಂದ 6 ನನ್ನ ಮಕ್ಕಳು. ಚಾ ಸಾ 7 ನನ್ನ ಹೆಂಡತಿ. ಚಾ ಸಾ 8 ರಿಂದ 10 ನಮ್ಮ ಊರಿನವರು. ಆರೋಪಿತರು ಪರಿಚಯ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-33 ಎಂದು ಗುರುತಿಸಲಾಯಿತು ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

ದಿ.23-03-2013 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ಆರೋಪಿತರು ನನ್ನ ಜಮೀನಿನ ಮತ್ತು ಅವರ ಜಮೀನಿನ ನಡುವೆ ಇರುವ ಬಂದಾರೆಯನ್ನು ಹೊಡೆದಿರುತ್ತಾರೆ. ಆಗ ಈ ವಿಷಯ ನನಗೆ ರಾತ್ರಿ ಗೊತ್ತಾಗುತ್ತದೆ. ಆಗ ಚಾ ಸಾ 4 ರವರು ಹಾಲು ಕಮಿಟಿಯಲ್ಲಿ ಮಲಗಿಕೊಂಡಿದ್ದನು. ಚಾ ಸಾ 4 ರವರು ಬೆಳಿಗ್ಗೆ ಎದ್ದು ಬರುವಾಗ 1 ನೇ ಆರೋಪಿತನು ತಡೆದು ನಿಲ್ಲಿಸಿ ಯಾಕೆ ಸೂಳೆಮಗನೆ ಬಹಳ ಮಾತಾನಾಡುತ್ತೀಯಾ ಅಂತಾ ಅವಾಚ್ಯಶಬ್ದಗಳಿಂದ ಬೈದು ಚೂಪಾದ ಕಟ್ಟಿಗೆಯಿಂದ ತಲೆಗೆ ಹೊಡೆದು ಗಾಯ ಪಡಿಸಿರುತ್ತಾನೆ. ಆಗ ಚಾಸಾ 5 ರವರು ಜಗಳ ಬಿಡಿಸಲು ಹೊದಾಗ 1 ನೇ ಆರೋಪಿತನು ಚೂಪಾದ ಕಟ್ಟಿಗೆಯಿಂದ ಹಣೆಯ ಮೇಲೆ ಹೊಡೆದು ಗಾಯ ಪಡಿಸಿರುತ್ತಾರೆ. ಆಗ ಚಾ ಸಾ 6 ರವರು ಬಿಡಿಸಲು ಹೊದಾಗ 1 ನೇ ಆರೋಪಿತನು ಆತನ ಹಣೆಗೆ ಕಟ್ಟಿಗೆಯಿಂದ ಹೊಡೆದು ಗಾಯ

ಪಡಿಸಿರುತ್ತಾರನೆ. ಆಮೇಲೆ ನಾನು ಮತ್ತು ಚಾಸಾ 7 ರವರು ಹೋದಾಗ 1 ನೇ ಆರೋಪಿತನು ಚೂಪಾದ ಕಟ್ಟಿಗೆಯಿಂದ ನನ್ನ ಬೆನ್ನಿಗೆ ಮತ್ತು ಬಲಗಾಲಿಗೆ ಹೊಡೆದಿರುತ್ತಾನೆ. ಚಾ ಸಾ 7 ರವರಿಗೆ 4 ರಿಂದ 6 ನೇ ಆರೋಪಿತರು ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ. ಹಾಗೂ 2 ನೇ ಆರೋಪಿತನು ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾನೆ. ಜಗಳ ನಡೆಯುತ್ತಿರುವಾಗ ಆರೋಪಿತರು ಯಾರಾದರೂ ಬಂದರೆ ನಿಮ್ಮನ್ನು ಸಹ ಖಲಾಸ್ ಮಾಡತ್ತೇವೆ ಎಂದು ಹೇಳುತ್ತಿದ್ದರು. ಆಗ ಚಾ ಸಾ 8 ರಿಂದ 10ರವರ ಬಂದು ಜಗಳಬಿಡಿಸಿ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೊದರು ನಾವು ಮೊದಲನೆಯದಾಗಿ ಸೇಡಂ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು. ನಂತರ ಕಲಬುರಗಿಯಲ್ಲಿಯರುವ ಬಸವೇಶ್ವರ ಆಸ್ಪತ್ರೆಗೆ ಬಹೊಗಿದ್ದೆವು.ತದ ನಂತರ ಸೊಲ್ಲಾಪುರ ದಲ್ಲಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೆವೆ. ಸಾಕ್ಷಿಗೆ ಎರಡು ಬಡಿಗೆಗಳನ್ನು ತೋರಿಸಾಲಗಿ ಸಾಕ್ಷಿಯು ಇದೆ ಬಡಿಗೆಯಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ.ಅದನ್ನು ಈಗಾಗಲೆ ಮು ಮಾ 1 ಮತ್ತು 2 ಎಂದು ಗುರುತಿಸಾಗಿದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**
**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿಃ23-03-2013 ರಂದು ಬೆಳಿಗ್ಗೆ 06-00 ಗಂಟೆಗೆ ಚಾ ಸಾ 4 ರವರು 1 ನೇ ಆರೋಪಿಯ ಮನೆಯ ಮುಂದುಗಡೆಯಿಂದ ಬರುತ್ತಿರುವಾಗ 1 ನೇ ಆರೋಪಿತನು ಆತನಿಗೆ ತಡೆದು ನಿಲ್ಲಿಸಿ ಏನು ಪಂಚಾಯಿತಿ ಮಾಡುತ್ತೀಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಚೂಪಾದ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಎಂದರೆ ಸರಿ. ಆಗ 7 ಜನರು ಅಕ್ರಮ ಕೂಟ ರಚಿಸಿಕೊಂಡು ಬಂದು ಅದರಲ್ಲಿ 1 ನೇ ಆರೋಪಿತನು ಚಾ ಸಾ 5 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಅದೇ ರೀತಿ 6 ನೇ ಆರೋಪಿತಳು ಚಾ ಸಾ 5 ರವರ ಕೈಗೆ ಕಚ್ಚಿ ಊತಗಾಯ ಪಡಿಸಿದರು ಎಂದರೆ ಸರಿ. ನನಗೂ ಮತ್ತು ಚಾ ಸಾ 7 ರವರಿಗೆ ಬೆನ್ನಿಗೆ ಮತ್ತು ಬಲತೊಡೆಗೆ ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿ. 2 ನೇ ಆರೋಪಿತನು ಚಾಸಾ 7 ರವರ ಸೀರೆ ಹಿಡಿದು ಎಳೆದಾಡಿ ಮಾನಭಂಗ ಉಂಟುಮಾಡಿದನು ಎಂದರೆ ಸರಿ. 3 ನೇ ಆರೋಪಿತನು ಈ ಸೂಳೆ ಮಕ್ಕಳಿಗೆ ಬಿಡಬೇಡಿರಿ ಹೊಡೆಯಿರಿ ಅಂತಾ ಪ್ರಚೋದನೆ ಮಾಡಿದನು ಎಂದರೆ ಸರಿ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ಆರೋಪಿ ಪರ ವಕೀಲರು ಪಾಟಿಸಾವಾಲಿಗೆ ಕಾಲಾವಕಾಶ ಕೋರಿದ್ದು ಆದರೆ ಯಾವುದೇ ಸಮಂಜಸ ಕಾರಣ ಇರದೇ ಇರುವುದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**